ಕೊಳಲ ಕಡೆಗೆ ನೋಡಿದರು.

ಅವಳು ಆ ಕೊಳಲನ್ನು ತನ್ನ ಗಂಡನಿಗಾಗಿ ತಂದಿದ್ದಾಳೆ ಎಂಬುದು ತಿಳಿದ ಮೇಲೆ ಅವಳ ಸ್ನೇಹಿತರಲ್ಲಿ ಒಬ್ಬರು, 'ನೀನು ನಿನ್ನ ಗಂಡನಿಗಾಗಿ ಈ ಕೊಳಲು ತಂದಿದ್ದೀಯಾ! ಆದರೆ ಒಂದಲ್ಲ ಒಂದು ದಿನ ಅದರಿಂದಲೇ ಹೊಡೆತ ತಿನ್ತೀಯಾ ಅನ್ನೋದನ್ನು ಮರೀಬೇಡ' ಎಂದರು.

ಅದಕ್ಕವಳು ನಗುನಗುತ್ತಲೇ 'ಹಾಗೇನಾದರೂ ಆದರೆ ಅದನ್ನು ನಾನು ಅನುಭವಿಸ್ತೀನಿ' ಎಂದು ಹೇಳಿ ತನ್ನೊಳಗೇ, 'ಏನೇ ಆದರೂ, ಇದು ಆರು ತಿಂಗಳವರೆಗೆ ಮಾತ್ರ' ಅಂದುಕೊಂಡಳು.

ಅವಳು ಮನೆಯನ್ನು ತಲುಪುವ ಹೊತ್ತಿಗಾಗಲೇ ಕತ್ತಲಾಗಿತ್ತು. ತಾನು ಆ ಮೂವರಿಗೆ ತಂದ ವಸ್ತುಗಳನ್ನು ಕೊಡಲು '...ಓಹ್! ಇವತ್ತು ಯಾವ ದಿಕ್ಕಿನಲ್ಲಿ ಸೂರ್ಯ ಹುಟ್ಟಾನೆ! ನಿನ್ನ ಅತ್ತೆಗೆ ಈ ನಸ್ಯ ತಂದಿದ್ದೀಯಲ್ಲಾ?' ಎಂದು ಥಟ್ಟನೆ ಅವಳ ಅತ್ತೆ ಕೇಳಿಯೇ ಬಿಟ್ಟಳು.

ಎದುರು ಕೋಣೆಯಲ್ಲಿ ಹಗ್ಗದ ಮಂಚದ ಮೇಲೆ ಕುಳಿತು ತನ್ನ ತಂಗಿಯ ಕೈಯಲ್ಲಿ ಕಳಿಸಿದ ಕೊಳಲನ್ನು ದೀಪದ ಬೆಳಕಿನಲ್ಲಿ ಪರೀಕ್ಷಿಸುತ್ತಾ ಕುಳಿತ ಅವಳ ಒರಟ ಗಂಡ: 'ನನಗೇನು ಇವಳು ಮರುಳು ಮಾಡ್ತಿದ್ದಾಳೋ! ಅಥವಾ ಏನು?' ಎಂದು ಆಶ್ಚರ್ಯಗೊಂಡ.

ಅದೃಷ್ಟವಶಾತ್ ಅವಳು ಕೊಳಲನ್ನು ತಂದಿದ್ದಳು. ಬೇರೆ ಏನಾದರೂ ತಿಂಡಿಯನ್ನು ತಂದಿದ್ದರೆ ಅವನು ಖಂಡಿತ ಆ ಪೊಟ್ಟಣವನ್ನೇ ನಾಯಿಗೆ ಆಹಾರವಾಗಿ ಬಿಸಾಡುತ್ತಿದ್ದ!

ಮರುದಿನವೇ ಅವನು ಊರಿನೊಳಗೆಲ್ಲಾ 'ನೆನ್ನೆ ದಿನ, ಅವಳು ಜಾತ್ರೆಯಲ್ಲಿ ಅವಳ ಅಣ್ಣಂದಿರೊಂದಿಗೆ ಇದ್ದಳೋ ಅಥವಾ ನಿಮ್ಮ ಜೊತೆಯಲ್ಲಿ ಬಂದಿದ್ದಳೋ' ಎಂದು ವಿಚಾರಿಸಿದ.

ಆದರೆ ಅವರೆಲ್ಲರಿಗೂ ಈಗಲೂ ಅವನು ತಂಬಾ ಸಂಶಯ ಸ್ವಭಾವದವನು, ಅತಿಯಾಗಿ ವರ್ತಿಸುವವನು ಎಂದು ಗೊತ್ತು, ಆದ್ದರಿಂದ ಜಾತ್ರೆಯಲ್ಲಿ ಇಬ್ಬರು, ಅವಳು ತನ್ನ ತಾಯಿಯ ಕಡೆಯ ವ್ಯಕ್ತಿಯೊಂದಿಗೆ ಮಾತನಾಡುತ್ತಿರುವುದನ್ನು ನೋಡಿದ್ದರೂ ಅದರ ಬಗೆಗೆ ಏನನ್ನೂ ಹೇಳಲಿಲ್ಲ. ಅವಳು ಅದೇ ಊರಿನವರಿಂದ ಒಂದು ರೂಪಾಯಿಯನ್ನು ಸಾಲವಾಗಿ ತೆಗೆದುಕೊಂಡಿದ್ದರೂ ಎಲ್ಲವೂ ಸರಿಹೋಯ್ತು.

ಅಷ್ಟಾದರೂ, ಪ್ರತಿಸಾರಿಯೂ ಆ ಕೊಳಲನ್ನು ನುಡಿಸಲು ತೆಗೆದುಕೊಳ್ಳುತ್ತಿದ್ದ. ಅದರೂ ಜೀವಾಗ್ನಿಯಿಂದ ಬೆಂದವನಂತೆ 'ನನಗೆಲ್ಲಾ ಗೊತ್ತಿರುವಂತೆ, ಆ ಪಾಪಿ ಹೆಂಗಸು ನನ್ನನ್ನು ಮರುಳು ಮಾಡ್ತಿದ್ದಾಳೆ' ಎಂದು ವೇದನೆ ಪಡುತ್ತಿದ್ದ. ಆದರೆ ಅವಳು ಮರುಳುಗೊಳಿಸುತ್ತಿರುವ ಪ್ರಶ್ನೆಯಲ್ಲಿ ಏಂತು? ಬದಲಾಗಿ ಅವಳು ಎಷ್ಟೊಂದು ಬದಲಾಯಿಸಿದ್ದಾಳೆಂದರೆ...

ಅವಳು ತನ್ನ ಅತ್ತೆಗೆ ಯಾವ ದೂರನ್ನೂ ಹೇಳುತ್ತಿರಲಿಲ್ಲ. ಪ್ರಾರಂಭದಲ್ಲಿ, 'ನಾನೇನು ನಾಲ್ಕು ಕೈಗಳನ್ನು ಹೊಂದಿದ್ದೀನಾ... ನಾನೇನಾದರೂ ರೆಕ್ಕೆಗಳನ್ನು ಹೊಂದಿದ್ದರೆ ಬೇಗ ಹಾರಿಹೋಗಿ ನೀರು ತರ್ತಿದ್ದೆ! ನೀವು ಸುಮ್ಮನೆ ಮನೆಯಲ್ಲಿ ಕುಳಿತು ಹೇಳಿದ್ದರೆ ಸಾಕಾಗಿತ್ತು, ಒಬ್ಬರು ಹೇಳಿದಷ್ಟು ಸುಲಭನಾ ಕೆಲಸ ಮಾಡೋದು? ಯಾರು ಕಷ್ಟ ಪಡ್ತಾರೋ ಅವರಿಗೆ ಗೊತ್ತು ಅದರ ಬಾಧೆ!' ಎನ್ನುತ್ತಿದ್ದಳು.

ತನ್ನ ಗಂಡನಿಗೂ ಕೂಡ,'ದೇವರು ನನಗೆ ನಾಲಗೆ ಕೊಟ್ಟಿರೋದರಿಂದ ನಾನು ಮಾತಾಡ್ತೀನಿ. ಯಾರದ್ದೋ ಸಾವಿಗೆ ನಾನ್ಯಾಕೆ ಅಳಬೇಕು? ನಾನು ನಗಬಾರದಾ? ನಾನ್ಯಾಕೆ ಅವನ ಜೊತೆಗೆ ಮಾತಾಡಬಾರದು? ಅವನೇನು ನನ್ನ ವೈರೀನಾ? ಪಾಪ, ಅವನೇನೂ ಮೋಸಗಾರನಲ್ಲ. ಹೆಚ್ಚಾಗಿ ನೀನೇ ಕಾಮಾಲೆ ಕಣ್ಣಿನಿಂದ ನೋಡ್ತಾ ಇದ್ದೀಯಾ!' ಎಂದು ಹರಿತವಾದ ಉತ್ತರಗಳನ್ನು ಕೊಡುತ್ತಿದ್ದಳು.

ಅವನೇನಾದರೂ ಅವಳ ಮೇಲೆ ಕೈಯೆತ್ತಿದರೆ ಅವಳೂ ಸಹ ಅಗೌರವದಿಂದ, 'ಪಾಪಿ, ನೀನು ಕಟುಕ! ರಟ್ಟೆಯಲ್ಲಿ ಅಷ್ಟೊಂದು ಬಲವಿದ್ದರೆ ಯಾಕೆ ನಿನಗಿಂತ ಜೋರಾಗಿರೋರ ಹತ್ತಿರ ಗುದ್ದಾಡಬಾರದು? ನಿನ್ನ ಬಲಾನ ಇಲ್ಯಾಕೆ ಹೆಂಡತಿ ಮುಂದೆ ತೋರಿಸ್ತಿದ್ದೀಯಾ?' ಎಂದು ನೋವಿನಿಂದ ಕೂಗಾಡಿ ಬೈದು ಬಿಡುತ್ತಿದ್ದಳು.

ಆದರೆ ಈಗ, ತನ್ನ ಸಂಶಯದ ಪತಿಗೆ: 'ಹೌದು, ನನ್ನ ಈ ಪೆದ್ದ ಸಾಕಾಗಲ್ಲಾ ಅಂತ ನಾನು ಅವನನ್ನು ಹಚ್ಕೊಂಡಿದ್ದೀನಿ. ಅವನೇನಾದರೂ ಜಾಣನಾಗಿದ್ದರೆ, ಲೋಕದ ಜನರೆಲ್ಲಾ ಒಂದೇ ರೀತಿ ಇರಲ್ಲ ಅಂತ ತಿಳ್ಕೊಂತಿದ್ದ" ಎಂದು ತನ್ನ ಮಿನುಗುವ ಕಣ್ಣುಗಳಿಂದ ಉತ್ತರಿಸುತ್ತಿದ್ದಳು.

ಇಷ್ಟು ಹೇಳಿದರೂ, ಅವಳ ಮಾತುಗಳಿಂದ ಅವನು ಸಮಾಧಾನವಾಗಲಿಲ್ಲ. 'ನೀನು ನನಗೆ ನಿಜ ಹೇಳು,